ಐ.ಸಿ.ಎ.ಆರ್.–ಕೆ.ಎಚ್.ಪಾಟೀಲ ಕೃಷಿ ವಿಜ್ಞಾನ ಕೇಂದ್ರ, ಹುಲಕೋಟಿ, ಗದಗ ಜಿಲ್ಲೆ

# ಕೃಷಿ ದರ್ಪಣ

## ಮಾಸಿಕ ಸುದ್ದಿ ಪತ್ರಿಕೆ

ಸಂಪುಟ–3 ಜುಲೈ, 2020 ಮಾಸಿಕ ಪತ್ರಿಕೆ ಸಂಚಿಕೆ–7

### "ಬಿ.ಟಿ ಹತ್ತಿ + ಹೆಸರು ಅಂತರ ಬೆಳೆ ಪದ್ಧತಿ ಹಾಗೂ ಹೆಸರು ಬೆಳೆಯಲ್ಲಿ ಕ್ಷೇತ್ರೋತ್ಸವ"



ದಿನಾಂಕ 27-07-2020 ರಂದು ಐ.ಸಿ.ಎ.ಆರ್–ಕೆ.ಎಚ್.ಪಾಟೀಲ ಕೃಷಿ ವಿಜ್ಞಾನ ಕೇಂದ್ರ, ಹುಲಕೋಟಿ ಇವರ 2020-21 ನೇ ಸಾಲಿನ ಮುಂಚೂಣಿ ಪ್ರಾತ್ಯಕ್ಷಿಕೆ ಮತ್ತು ರಾಷ್ಟ್ರೀಯ ಆಹಾರ ಭದ್ರತಾ ಯೋಜನೆಯ ಗೊಂಚಲು ಮುಂಚೂಣಿ ಪ್ರಾತ್ಯಕ್ಷಿಕೆ ಯೋಜನೆ ಅಡಿ ಶಿರಹಟ್ಟಿ ತಾಲೂಕಿನ ಚಿಕ್ಕಸವಣೂರು ಗ್ರಾಮದ ಸಂಜೀವರಡ್ಡಿ ಗೊಡಚಳ್ಳಿ ಹಾಗೂ ಮಲ್ಲಪ್ಪ ಮರಾಠಿ ಇವರ ಹೊಲಗಳಲ್ಲಿ ಅನುಕ್ರಮವಾಗಿ ಬಿ.ಟಿ ಹತ್ತಿ + ಹೆಸರು ಅಂತರ ಬೆಳೆ ಹಾಗೂ ಹೆಸರು ಬೆಳೆಗಳ ಕ್ಷೇತ್ರೋತ್ಸವವನ್ನು ಏರ್ಪಡಿಸಲಾಗಿತ್ತು. ರೈತರ ಆದಾಯ ದ್ವಿಗುಣಗೊಳಿಸುವ ನಿಟ್ಟಿನಲ್ಲಿ ಪ್ರಾತ್ಯಕ್ಷಿಕೆ ತಾಕುಗಳಿಗೆ ರೈತರ ಭೆಟ್ಟಿಯನ್ನು ಏರ್ಪಡಿಸಿ ಸುಧಾರಿತ ತಂತ್ರಜ್ಞಾನಗಳ ಅಳವಡಿಕೆಯ ಪರಿಚಯವನ್ನು ರೈತರಿಗೆ ಮಾಡಿಕೊಡಲಾಯಿತು. ಕೆವಿಕೆ ಬೇಸಾಯ ಶಾಸ್ತ್ರ ತಜ್ಞರಾದ ವಿ.ಡಿ.ವೈಕುಂಠೆ ಇವರು ಬಿ.ಟಿ. ಹತ್ತಿ ಬೆಳೆಯಲ್ಲಿ ಹೆಸರು ಬೆಳೆಯನ್ನು ಅಂತರ ಬೆಳೆಯಾಗಿ ಬೆಳೆದರೆ ರೈತರು ಶೇಕಡಾ 25 ರಷ್ಟು ಹೆಚ್ಚಿನ ಆದಾಯವನ್ನು ಪಡೆಯಬಹುದೆಂದು ತಿಳಿಸಿದರು. ಹೆಸರು ಬೆಳೆಯಲ್ಲಿ ಡಿ.ಜಿ.ಜಿ.ವಿ–2, ಅಧಿಕ ಇಳುವರಿ ಕೊಡುವ ತಳಿಯಾಗಿದ್ದು, ಕಾಯಿ ಸಿಡಿಯುವದಿಲ್ಲ ಎಂದು ಹೇಳಿದರು. ವಿಸ್ತರಣಾ ತಜ್ಞರಾದ ಎಸ್.ಎಚ್.ಆದಾಪೂರ ಇವರು ಹೆಸರು ಬೆಳೆಯಲ್ಲಿ ಯಂತ್ರೋಪಕರಣದಿಂದ ಕೊಯ್ಲಿನ ಬಗ್ಗೆ ರೈತರಿಗೆ ಮಾಹಿತಿ ನೀಡಿದರು. ನಂತರ ಯಂತ್ರೋಪಕರಣದಿಂದ ಹೆಸರು ಬೆಳೆಯ ಕೊಯ್ಲು ಮಾಡುವ ಪ್ರಾತ್ಯಕ್ಷಿಕೆಯನ್ನು ಕೈಗೊಳ್ಳಲಾಯಿತು. ಕಾರ್ಯಕ್ರಮದಲ್ಲಿ ಮಣ್ಣು ವಿಜ್ಞಾನ ತಜ್ಞರಾದ ಎನ್.ಎಚ್.ಭಂಡಿ ಇವರು ಬೆಳೆ ಪೌಷ್ಟಿಕತೆ ಕುರಿತು ರೈತರಿಗೆ ಮಾಹಿತಿ ನೀಡಿದರು. ಪ್ರಗತಿಪರ ರೈತರಾದ ಮಲ್ಲಪ್ಪ ಅಚ್ಚಳ್ಳ, ಮಹದೇವಪ್ಪ ಕನಿಕೇರಿ, ಸೋಮರಡ್ಡಿ ಗೋಕಾವಿ, ಸೋಮರಡ್ಡಿ ಗೊಡಚಳ್ಳಿ, ಶೇಖಪ್ಪ ಭೈರಾಪೂರ ಹಾಗೂ ಜಗದೀಶ ಹಂಚಿನಾಳ ಇವರುಗಳು ಉಪಸ್ಥಿತರಿದ್ದರು.

### ಸುಧಾರಿತ ಬೀಜಗಳ ಪ್ರಚಾರ ಕುರಿತು ಕಾರ್ಯಾಗಾರ





ಕೃಷಿ ವಿಶ್ವ ವಿದ್ಯಾಲಯ, ಧಾರವಾಡ ಇವರು ಅಭಿವೃದ್ಧಿಪಡಿಸಿರುವ ವಿವಿಧ ಬೆಳೆಗಳ ಸುಧಾರಿತ ಬೆಳೆಗಳ ಪ್ರಚಾರ ಕುರಿತು ದಿನಾಂಕ 02-07-2020 ರಂದು ಕೆ.ಎಚ್.ಪಾಟೀಲ ಕೃಷಿ ವಿಜ್ಞಾನ ಕೇಂದ್ರ, ಹುಲಕೋಟಿಯಲ್ಲಿ ಕಾರ್ಯಾಗಾರವನ್ನು ಏರ್ಪಡಿಸಲಾಗಿತ್ತು. ಈ ಕಾರ್ಯಾಗಾರದಲ್ಲಿ ಡಾ. ಎಸ್.ಬಿ. ಕಲಘಟಗಿ, ಡೀನ್ (ಕೃಷಿ), ಕೃಷಿ ಕಾಲೇಜ, ವಿಜಯಪುರ ಇವರು ಭಾಗವಹಿಸಿ ಕೃಷಿ ವಿಶ್ವ ವಿದ್ಯಾಲಯ, ಧಾರವಾಡ ಇವರು ಬಿಡುಗಡೆಗೊಳಿಸಿದ ವಿವಿಧ ಬೆಳೆಗಳ ಹೊಸ ತಳಗಳು, ಪ್ರಮುಖವಾಗಿ ಹಿಂಗಾರಿ ಜೋಳ, ಗೋದಿ, ಶೇಂಗಾ ಇತ್ಯಾದಿ ಮತ್ತು ರೈತರಿಗೆ ಬೀಜಗಳ ಲಭ್ಯತೆ

ಕುರಿತು ತಿಳಿಸಿದರು. ಈ ಕಾರ್ಯಾಗಾರದಲ್ಲಿ ವಿಶ್ವ ವಿದ್ಯಾಲಯದ ವಿಜ್ಞಾನಿಗಳು, ಕೃಷಿ ವಿಜ್ಞಾನ ಕೇಂದ್ರದ ವಿಜ್ಞಾನಿಗಳು ಹಾಗೂ ಕೃಷಿ ಇಲಾಖೆಯ ಜಂಟಿ ನಿರ್ದೇಶಕರು, ಉಪ ನಿರ್ದೇಶಕರು, ಸಹಾಯಕ ಕೃಷಿ ನಿರ್ದೇಶಕರು, ಕೃಷಿ ಅಧಿಕಾರಿಗಳು, ವಿಸ್ತರಣಾ ಸಿಬ್ಬಂದಿಗಳು, ಕರ್ನಾಟಕ ರಾಜ್ಯ ಬೀಜ ನಿಗಮದ ಅಧಿಕಾರಿಗಳು ಹಾಗೂ ರಾಷ್ಟ್ರೀಯ ಬೀಜ ನಿಗಮದ ಅಧಿಕಾರಿಗಳು ಭಾಗವಹಿಸಿದ್ದರು.

## ಜುಲೈ ತಿಂಗಳಲ್ಲಿ ಕೈಗೊಂಡ ಪ್ರಾತ್ಯಕ್ಷಿಕೆಗಳು

| ಕ್ರ. ಸಂ. | ಪ್ರಾತ್ಯಕ್ಷಿಕೆಗಳ ವಿವರ | ಕ್ಷೇತ್ರ (ಹೆಕ್ಟೇರ) | ಒಟ್ಟು ರೈತರ ಸಂಖ್ಯೆ | ಗ್ರಾಮಗಳು (ತಾಲೂಕು) |
|---|---|---|---|---|
| 1 | ಸಾವಯವ ಪರಿಕರಗಳ ತಯಾರಿಕೆ | - | 6 | ಶಿರೋಳ (ಗದಗ)<br>ಶಿಂಗಟರಾಯನಕೇರಿ (ಮುಂಡರಗಿ) |
| 2 | ಪೌಷ್ಠಿಕ ತೋಟದ ಪ್ರಾತ್ಯಕ್ಷಿಕೆ | 40 | 25 | ಶಿರೋಳ (ಗದಗ), ಚಿಕ್ಕಸವಣೂರು (ಶಿರಹಟ್ಟಿ)<br>ಶಿಂಗಟರಾಯನಕೇರಿ (ಮುಂಡರಗಿ) |
| 3 | ಗೊಂಚಲು ಮುಂಚೂಣಿ ಪ್ರಾತ್ಯಕ್ಷಿಕೆ ಅಡಿಯಲ್ಲಿ ತೊಗರಿ ಬೆಳೆಯ ಟಿ.ಎಸ್-3ಆರ್ ತಳಿಯಲ್ಲಿ ಸಮಗ್ರ ಬೆಳೆ ನಿರ್ವಹಣೆ | 20 | 50 | |
| | **ನಿಕ್ರಾ ಯೋಜನೆ ಅಡಿಯಲ್ಲಿ ಕೈಗೊಂಡ ಪ್ರಾತ್ಯಕ್ಷಿಕೆಗಳು** | | | |
| 1 | ಪೌಷ್ಠಿಕ ತೋಟದ ಪ್ರಾತ್ಯಕ್ಷಿಕೆ | 0.08 | 6 | ಬೆಳಧಡಿ (ಗದಗ) |
| 2 | ಬಹುವಾರ್ಷಿಕ ಮೇವಿನ ಬೆಳೆಗಳು | 1 | 10 | ಬೆಳಧಡಿ ನಭಾಪೂರ & ಕಬಲಾಯತಕಟ್ಟಿ (ಗದಗ) |
| 3 | ಒಣ ಬೇಸಾಯದ ತೋಟಗಾರಿಕೆ | 4 | 10 | |

## ಜುಲೈ ತಿಂಗಳಲ್ಲಿ ಆಯೋಜಿಸಲಾದ ತರಬೇತಿಗಳು

| ದಿನಾಂಕ | ವಿಷಯ | ತರಬೇತಿಗಳ ಸಂಖ್ಯೆ | ಭಾಗವಹಿಸಿದವರ ಸಂಖ್ಯೆ |
|---|---|---|---|
| 01-07-2020 | ಹೆಸರು ಬೆಳೆಯಲ್ಲಿ ಸಮಗ್ರ ಬೆಳೆ ನಿರ್ವಹಣೆ ಮತ್ತು ಸಮಗ್ರ ರೋಗ ಹತೋಟಿ | 1 | 24 |
| 02-07-2020 | ಕೃಷಿ ಅರಣ್ಯ | 1 | 26 |
| 03-07-2020 & 10-07-2020 | ಆಹಾರದಲ್ಲಿ ರಕ್ಷಣೆ ಕೊಡುವ ಆಹಾರಗಳ ಮಹತ್ವ | 2 | 29 |
| 03-07-2020 | ಈರುಳ್ಳಿ ಬೆಳೆಯಲ್ಲಿ ಸಮಗ್ರ ಬೆಳೆ ನಿರ್ವಹಣೆ | 1 | 16 |
| 03-07-2020 | ಹೈನು ದನಗಳಲ್ಲಿ ಪೋಷಕಾಂಶಗಳ ನಿರ್ವಹಣೆ | 1 | 23 |
| 09-07-2020 & 30-07-2020 | ಮೆಣಸಿನಕಾಯಿ ಬೆಳೆಯಲ್ಲಿ ಪೋಷಕಾಂಶಗಳ ನಿರ್ವಹಣೆ | 2 | 27 |
| 09-07-2020 & 31-07-2020 | ಹುಲ್ಲಿನ ಬೆಳೆಗಳ ಉತ್ಪಾದನೆ | 2 | 58 |
| 10-07-2020 | ಕುರಿ ಸಾಕಾಣಿಕೆಯಲ್ಲಿ ನಾರಿ ಸುವರ್ಣ ತಳಿಯ ಅಭಿವೃದ್ಧಿ | 1 | 13 |
| 08-07-2020 | ಮಾವಿನ ತೋಟಗಳ ನಿರ್ವಹಣೆ | 1 | 25 |
| 10-07-2020 | ಹೂವಿನ ಬೆಳೆಗಳಲ್ಲಿ ಸಮಗ್ರ ಬೆಳೆ ನಿರ್ವಹಣೆ | 1 | 16 |
| 10-07-2020 | ಹಬ್ಬು ಶೇಂಗ ಬೆಳೆಯಲ್ಲಿ ಪೋಷಕಾಂಶಗಳ ನಿರ್ವಹಣೆ | 2 | 28 |
| 10-07-2020 & 15-07-2020 | ಹೆಸರು ಬೆಳೆಯಲ್ಲಿ ಪೋಷಕಾಂಶಗಳ ನಿರ್ವಹಣೆ | 2 | 34 |
| 27-07-2020 | ಆರೋಗ್ಯ ಮತ್ತು ಪೌಷ್ಠಿಕತೆ | 3 | 55 |

| ದಿನಾಂಕ | ವಿಷಯ | ತರಬೇತಿಗಳ ಸಂಖ್ಯೆ | ಭಾಗವಹಿಸಿದವರ ಸಂಖ್ಯೆ |
|---|---|---|---|
| 30-07-2020 & 31-07-2020 | | | |
| 27-07-2020 | ರೈತ ಉತ್ಪಾದಕ ಸಂಘಗಳ ಸ್ಥಾಪನೆ | 1 | 24 |

## ಕ್ಷೇತ್ರ ಭೇಟಿ



ಕ್ಷೇತ್ರ ಪ್ರಯೋಗ – ಶೇಂಗಾ ಬೆಳೆ



ಮುಂಚೂಣಿ ಪ್ರಾತ್ಯಕ್ಷಿಕೆ– ಬಿ.ಟಿ.ಹತ್ತಿ + ಹೆಸರು



ಮುಂಚೂಣಿ ಪ್ರಾತ್ಯಕ್ಷಿಕೆ–ಗೋವಿನ ಜೋಳ + ತೊಗರಿ



ಮುಂಚೂಣಿ ಪ್ರಾತ್ಯಕ್ಷಿಕೆ– ಸೇವಂತಿಗೆ



ಎನ್.ಎಫ್.ಎಸ್.ಎಮ್–ಹೆಸರು ಬೆಳೆ



ಎನ್.ಎಫ್.ಎಸ್.ಎಮ್–ತೊಗರಿ ಬೆಳೆ



ಮುಂಚೂಣಿ ಪ್ರಾತ್ಯಕ್ಷಿಕೆ– ಪೌಷ್ಠಿಕ ತೋಟ



ಮುಂಚೂಣಿ ಪ್ರಾತ್ಯಕ್ಷಿಕೆ– ಸಾವಯವ ಕೃಷಿ



ಮುಂಚೂಣಿ ಪ್ರಾತ್ಯಕ್ಷಿಕೆ– ಮೇವು ಉತ್ಪಾದನೆ


ಪ್ರಧಾನ ಸಂಪಾದಕರು:
ಡಾ॥ ಎಲ್.ಜಿ.ಹಿರೇಗೌಡರ
ಹಿರಿಯ ವಿಜ್ಞಾನಿಗಳು ಹಾಗೂ ಮುಖ್ಯಸ್ಥರು

ಸಂಪಾದಕರು:
ಡಾ॥ ಸುಧಾ ವಿ. ಮಂಕಣಿ
ವಿಷಯ ತಜ್ಞರು (ಗೃಹ ವಿಜ್ಞಾನ)

ಕಾರ್ಯಕ್ರಮಗಳ ಸಂಯೋಜಕರು:
ಶ್ರೀ ವ್ಹಿ.ಡಿ.ವೈಕುಂಠೆ, ವಿಷಯ ತಜ್ಞರು (ಬೇಸಾಯ ಶಾಸ್ತ್ರ)
ಶ್ರೀ ಎಸ್.ಎಚ್. ಆದಾಪೂರ, ವಿಷಯ ತಜ್ಞರು (ಕೃಷಿ ವಿಸ್ತರಣೆ)
ಶ್ರೀ ಸುರೇಶ ಹಳೇಮನಿ, ಫಾರ್ಮ ಮ್ಯಾನೇಜರ
ಶ್ರೀ ಎನ್.ಎಚ್.ಭಂಡಿ, ವಿಷಯ ತಜ್ಞರು (ಮಣ್ಣು ವಿಜ್ಞಾನ)
ಕುಮಾರಿ ಹೇಮಾವತಿ ಹಿರೇಗೌಡರ, ವಿಷಯ ತಜ್ಞರು (ತೋಟಗಾರಿಕೆ)
ಡಾ॥ ಬಿ.ಎಮ್.ಮುರಗೋಡ, ಕಾರ್ಯಕ್ರಮ ಸಹಾಯಕರು (ಪಶು ಸಂಗೋಪನೆ)

ವಿನ್ಯಾಸ ಹಾಗೂ ಅಕ್ಷರ ಜೋಡಣೆ:
ಶ್ರೀಮತಿ ಲಲಿತಾ ಅಸೂಟಿ, ಕಾರ್ಯಕ್ರಮ ಸಹಾಯಕರು (ಗಣಕ ಯಂತ್ರ)

ಸಹಾಯ:
ಶ್ರೀ ಎಮ್.ಬಿ.ಜಕ್ಕನಗೌಡರ, ಕಚೇರಿ ಅಧೀಕ್ಷಕರು

ಮುದ್ರಕರು ಹಾಗೂ ಪ್ರಕಾಶಕರು: ಡಾ॥ ಎಲ್.ಜಿ.ಹಿರೇಗೌಡರ, ಹಿರಿಯ ವಿಜ್ಞಾನಿಗಳು ಮತ್ತು ಮುಖ್ಯಸ್ಥರು, ಐ.ಸಿ.ಎ.ಆರ್–ಕೆ.ಎಚ್.ಪಾಟೀಲ ಕೃಷಿ ವಿಜ್ಞಾನ ಕೇಂದ್ರ, ಹುಲಕೋಟಿ–582205, ಗದಗ ಜಿಲ್ಲೆ, ಕರ್ನಾಟಕ ರಾಜ್ಯ


ಫೋನ್: (08372)289606, ಇ–ಅಂಚೆ:kvkhulkoti@gmail.com, ಅಂತರ್ಜಾಲ: www.khpkvk.org